## ಯುದ್ಧದ ಬಗ್ಗೆ ಪ್ರಬಂಧ

ಪ್ರಾಥಮಿಕ ಶಾಲೆಯಲ್ಲಿ ಟೀಚರ್ ವಿದ್ಯಾರ್ಥಿಗಳಿಗೆ ಹೇಳಿದರು, 'ನೀವೀಗ ಯುದ್ಧ ನಡೆಯುತ್ತಿರುವ ಪ್ರದೇಶದಲ್ಲಿದ್ದೀರಿ ಎಂದು ಭಾವಿಸಿಕೊಂಡು ಯುದ್ಧದ ಬಗ್ಗೆ ಒಂದು ಪ್ರಬಂಧ ಬರೆಯಿರಿ' ಎಂದು. ಎಲ್ಲಾ ವಿದ್ಯಾರ್ಥಿಗಳು ಬರೆಯುತ್ತಿದ್ದರು. ನಂಜ ಏನೂ ಬರೆಯದೆ ಹಾಗೇ ಸುಮ್ಮನೆ ಕುಳಿತುಕೊಂಡಿದ್ದ. ಟೀಚರ್, 'ನಂಜ, ನೀನ್ಯಾಕೆ ಏನೂ ಬರೀದೆ ಹಾಗೇ ಕೂತಿದ್ದೀಯ?' ಎಂದು ಪ್ರಶ್ನಿಸಿದರು. ಆಗ ನಂಜ. 'ಯುದ್ಧದ ಆರಂಭದಲ್ಲಿಯೇ ಶತ್ರುಗಳು ನನ್ನನ್ನು ಕೊಂದುಬಿಟ್ರಲ್ಲ ಸಾರ್, ಇನ್ನೇನು ಬರೆಯಾಕಾತದೆ?' ಎಂದ.

**ವಿ. ಹೇಮಂತ ಕುಮಾರ್**






ಕಲೆ: ಗಣೇಶ ಆಚಾರ್ಯ

## ಮುದ್ದೆ ಊಟ ಒಳ್ಳೇದು

ಪರಮೇಶಿಯ ಮಿತ್ರನೊಬ್ಬ ಪ್ರೀತಿಸಿದ ಹುಡುಗಿಯನ್ನು ಮದುವೆಯಾದ. ಆತನ ಆಹಾರ ಶೈಲಿ ಬೇರೆ, ಆಕೆಯದ್ದೇ ಬೇರೆ. ಊಟ, ತಿಂಡಿ ಸಾಧ್ಯವಾದಷ್ಟೂ ಅಪ್ಪ ಅಮ್ಮ ಏನು ಇಷ್ಟಪಡುತ್ತಾರೆ ಎನ್ನುವುದನ್ನು ಗಮನಿಸಿ ಅದನ್ನೇ ಮಾಡೆಂದು ಆತ ಮುಂಚಿತವಾಗಿಯೇ ಸೂಚಿಸಿದ್ದ. ಅಂದು ಊಟಕ್ಕೆ ಬಂದವನಿಗೆ ಮಡದಿ ಅನ್ನ ಸಾರು ಬಡಿಸಿದ್ದಳು. ಅನ್ನ ವಿಪರೀತ ಮುದ್ದೆ ಮುದ್ದೆಯಾಗಿತ್ತು. ಇದ್ಯಾಕೆ ಹೀಗಿದೆ ಎಂದು ಕೇಳಿದ. ಅದಕ್ಕವಳು, 'ಅತ್ತೆ ಮಾವ ಊಟಕ್ಕೆ ಮುದ್ದೆ ಆದ್ರೇನೆ ಸಮಾಧಾನ ಅಂತ ಮಾತಾಡ್ಕೋತಿದ್ರು... ಅನ್ನ ಮುದ್ದೆ ಮುದ್ದೆಯಿದ್ದರೆ ಅವರಿಗೂ ತಿನ್ನಲು ಸರಾಗ. ಅದಕ್ಕೇ ಮಾಡಿದೆ' ಎಂದಳು. ಅವರು ಹೇಳಿದ್ದು ರಾಗಿ ಮುದ್ದೆ. ಅವಳು ಗ್ರಹಿಸಿದ್ದು ಮುದ್ದೆ ಅನ್ನ.

**ಸಂದೇಶ್ ಎಚ್. ನಾಯ್ಕ್**